**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಬಂಗಾರಪೇಟೆ**

**ಸಿಸಿ ಸಂಖ್ಯೆ:2283/2023** **ಚಾಸಾ:2** **ಪ್ರಾಸಾ:2**

**ಸಾಕ್ಷಿಯನ್ನು ದಿ:13.02.2025 ರಂದು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು**

| | |
|---|---|
| ಹೆಸರು : | ರುಕ್ಕಿಣಿ |
| ತಂದೆಯ ಹೆಸರು: | ವೆಂಕಟಚಲಪತಿ |
| ವಯಸ್ಸು: | 37 ವರ್ಷ |
| ವೃತ್ತಿ: | ಗೃಹಿಣಿ |
| ವಾಸ ಸ್ಥಳ: | ಅಮರಾವತಿ, ಬಂಗಾರಪೇಟೆ ತಾಲ್ಲೂಕು. |

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ಅರೋಪಿಯನ್ನು ನೋಡಿದ್ದೇನೆ. ಚಾಸಾ.1 ನನ್ನ ಸ್ನೇಹಿತೆ , ಚಾಸಾ.3 ಪರಿಚಯ. ದಿ: 22.06.2023 ರಂದು ಬೆಳಿಗ್ಗೆ 11.30 ರ ಸಮಯದಲ್ಲಿ ನನ್ನ ತವರು ಮನೆಯಾದ ತ್ಯಾವರನಹಳ್ಳಿಗೆ ದ್ವಿಚಕ್ರ ವಾಹನದಲ್ಲಿ ನಾನು ಒಬ್ಬಳೇ ಹೋಗುತ್ತಿದ್ದಾಗ ಹುಣಸನಹಳ್ಳಿ ಸೇತುವೆ ಬಳಿ ಒಂದು ಮಟನ್ ಅಂಗಡಿಯ ಹತ್ತಿರ ಅರೋಪಿ ತನ್ನ ಕೈಗಳಿಂದ ಚಾಸಾ.1 ರವರ ಹೊಟ್ಟೆಗೆ ಹೊಡೆಯುತ್ತಿದ್ದ. ಚಾಸಾ.1 ರವರು ಕಿರುಚಾಡುತ್ತಿದ್ದರು. ಅರೋಪಿ ಕೋಲಿನಿಂದ ಚಾಸಾ.1 ರವರ ಕೈ ರೆಟ್ಟೆಗಳಿಗೆ ಹೊಡೆಯುತ್ತಿದ್ದ. ಅರೋಪಿ ಚಾಸಾ.1 ರವರಿಗೆ ನಾನು ಹೇಳಿದ ಹಾಗೇ ಕೇಳದೇ ಇದ್ದರೆ ಸಾಯಿಸಿ ಬಿಡುವುದಾಗಿ ಪ್ರಾಣ ಬೆದರಿಕೆ ಹಾಕಿದ. ಚಾಸಾ.1 ರವರು ತಲೆ ಸುತ್ತು ಬಿದ್ದಳು. ಆಗ ನಾನು ಮತ್ತು ಇನ್ನೊಬ್ಬ ವ್ಯಕ್ತಿ ಚಾಸಾ.1 ರವರನ್ನು ಬಂಗಾರಪೇಟೆ ಸರ್ಕಾರಿ ಆಸ್ಪತ್ರೆಗೆ ಚಾಸಾ.1 ರವರ ಗಾಡಿಯಲ್ಲಿ ಕರೆದುಕೊಂಡು ಬಂದೆವು. ಈ ಸಂಬಂಧ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲು: ಶ್ರೀ. ಕೆ. ಎಂ.ವಕೀಲರಿಂದ:**

ನಾನು ಮತ್ತು ಚಾಸಾ.1 ರವರು ಆತ್ಮೀಯರು ಎಂದರೆ ಸರಿ. ನಾನು ತ್ಯಾವರನಹಳ್ಳಿಗೆ ಹೋಗುತ್ತಿದ್ದೆ ಎಂದು ನಾನು ಪೋಲೀಸರಿಗೆ ಹೇಳಿಲ್ಲ. ನಾನು ನನ್ನ ಮನೆಯನ್ನು ಬೆಳಿಗ್ಗೆ 11.30 ರ ನಂತರ ಬಿಟ್ಟಿರುತ್ತೇನೆ. ಬೂದಿಕೋಟೆ ಕ್ರಾಸ್‌ನಿಂದ ಸೇತುವೆಗೆ ಹೋಗುವ ತನಕ ರಸ್ತೆಯು ತುಂಬಾ ಜನದಟ್ಟಣೆಯಿಂದ ಕೂಡಿರುತ್ತದೆ ಎಂದರೆ ಸರಿ. ಸದರಿ ರಸ್ತೆಯು ಹಳ್ಳ ದಿನ್ನೆಗಳಿಂದ ಕೂಡಿದೆ ಎಂದರೆ ಸರಿಯಲ್ಲ. ಐನೋರಹೊಸಹಳ್ಳಿಗೆ ಹೋಗಬೇಕಾದರೆ ಸೇತುವೆ ಕೆಳಗಡೆ ಹೋಗಬೇಕು ಎಂದರೆ ಸರಿ. ಕೆಳಗಿರುವ ರಸ್ತೆಯ ಬದಿಯಲ್ಲಿ ಮಟನ್, ಚಿಕನ್ ಅಂಗಡಿಗಳು ಇದ್ದು , ರಸ್ತೆಯು ಚಿಕ್ಕದಾಗಿರುತ್ತದೆ ಎಂದರೆ ಸರಿ. ಸದರಿ ರಸ್ತೆಯು

ಸಾರ್ವಜನಿಕರು ಬಳಸುತ್ತಾರೆ ಎಂದರೆ ಸರಿ. ಚಾಸಾ.1 ಮತ್ತು ಅರೋಪಿ ರವರು ಆ ಸ್ಥಳಕ್ಕೆ ಯಾವ ಸಮಯಕ್ಕೆ ಬಂದರು ಎಂದು ನಾನು ಕಣ್ಣಾರೆ ನೋಡಿಲ್ಲ. ಚಾಸಾ.1 ಮತ್ತು ಅರೋಪಿಯ ನಡುವೆ ಇರುವ ಸಂಬಂಧದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಚಲಾಯಿಸಿಕೊಂಡು ಹೋದ ನನ್ನ ಸ್ವಂತ ದ್ವಿಚಕ್ರ ವಾಹನ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಗಾಡಿಯು ಪೆಸಿನೋ ಕಂಪನಿಯದಾಗಿದ್ದು ಸದರಿ ವಿಷಯವನ್ನು ನಾನು ಪೋಲೀಸರಿಗೆ ತಿಳಿಸಿಲ್ಲ. ಚಾಸಾ.1 ರವರ ವಾಹನ ಯಾವುದೂ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಚಾಸಾ.1 ರವರ ವಾಹನ ಟಿ ವಿ ಎಸ್ ಗಾಡಿಯಾಗಿದ್ದು ನೊಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಈ ವಿಷಯವನ್ನು ನಾನು ಪೋಲೀಸರಿಗೆ ಹೇಳಿಲ್ಲ. ಅರೋಪಿ ಚಾಸಾ.1 ರವರಿಗೆ ಕೋಲಿನಿಂದ ಹಲ್ಲೆ ಮಾಡಿಲ್ಲ, ಅವ್ಯಾಚ್ಯ ಶಬ್ದಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಬಂಗಾರಪೇಟೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಬಂಗಾರಪೇಟೆ**

**ಸಿಸಿ ಸಂಖ್ಯೆ:2283/2023** **ಚಾಸಾಃ3** **ಪ್ರಾಸಾಃ3**

**ಸಾಕ್ಷಿಯನ್ನು ದಿಃ13.02.2025 ರಂದು ಕರೆಸಿ ಪ್ರಮಾಣ ವಚನ ಮೂಡಿಸಲಾಯಿತು**

| | |
|---|---|
| **ಹೆಸರು ಃ** | ರವೀಂದ್ರಗೌಡ |
| ತಂದೆಯ **ಹೆಸರುಃ** | ವೆಂಕಟೇಶಪ್ಪ |
| **ವಯಸ್ಸುಃ** | 46 ವರ್ಷ |
| **ವೃತ್ತಿಃ** | ವ್ಯವಸಾಯ |
| **ವಾಸ ಸ್ಥಳಃ** | ಒಂಭತ್ತುಗುಳಿ ಗ್ರಾಮ, ಬಂಗಾರಪೇಟೆ ತಾಲ್ಲೂಕು. |

**ಮುಖ್ಯ ವಿಚಾರಣೆ ಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಅರೋಪಿಯನ್ನು ಘಟನೆ ದಿನ ನೋಡಿಲ್ಲ. ನಾನು ಘಟನೆಯನ್ನು ಪ್ರತ್ಯೇಕ್ಷವಾಗಿ ನೋಡಿಲ್ಲ. ದಿಃ 22.06.2023 ರಂದು ಸಂಜೆ 5.30 ಗಂಟೆಗೆ ಚಾಸಾ.1 ರವರು ನನಗೆ ದೂರವಾಣಿ ಕರೆ ಮಾಡಿ ಅರೋಪಿ ನನಗೆ ರಸ್ತೆಯಲ್ಲಿ ಅಡ್ಡ ಹಾಕಿ ನನ್ನ ಮೊಬೈಲ್ ನ್ನು ಹೊಡೆದು ಹಾಕಿ ಕೋಲಿನಿಂದ ನನ್ನ ಎಡಬಲಕ್ಕೆ ಹೊಡೆದು , ಬಟ್ಟೆಯನ್ನು ಹರಿದು ಹಾಕಿದ ಮತ್ತು ಪ್ರಾಣ ಬೆದರಿಕೆ ಹಾಕಿದ ಎಂದು ಪೋನ್ ನಲ್ಲಿ ಹೇಳಿದಳು. ಚಾಸಾ.2 ರವರು ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದರು ಎಂದು ಹೇಳಿದಳು. ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ಸಂಗತಿ ನಿಜವಾಯಿತು. ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ.

**ಪಾಟೀ ಸವಾಲುಃ ಶ್ರೀ.ಕೆ.ಎಂ.ವಕೀಲರಿಂದಃ**

ಚಾಸಾ.1 ನನ್ನ ತಂಗಿ ಎಂದರೆ ಸರಿ. ಚಾಸಾ.2 ನನಗೆ ಪರಿಚಯ ಎಂದರೆ ಸರಿಯಲ್ಲ. ನಾನು ದಿಃ 23.06.2023 ರಂದು ಹೇಳಿಕೆ ನೀಡಿದ್ದೇನೆ. ಅರೋಪಿ ಚಾಸಾ. 1 ರವರನ್ನು ಕೋಲಿನಿಂದ ಹೊಡೆದಿಲ್ಲ , ಅವ್ಯಾಚ್ಚ ಶಬ್ದಗಳಿಂದ ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ.2 ರವರು ಚಾಸಾ.1 ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

**ಓ ಹೇ ಕೇ ಸರಿ ಇದೆ.**

ಪ್ರಭಾರ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಬಂಗಾರಪೇಟೆ.